ಅಧ್ಯಕ್ಷರು:– ಈಗ ಹೆಚ್.ಎಸ್. ಪ್ರಕಾಶ್ ಮತ್ತು ರೇವಣ್ಣನವರು ಕೇಳಿ.

ಶ್ರೀ ಹೆಚ್.ಎಸ್. ಪ್ರಕಾಶ್:– ಮಾನ್ಯ ಅಧ್ಯಕ್ಷರೆ, ಡೈರಿ ಸರ್ಕಲ್‌ನಿಂದ ಬುತ್ತೇನಹಳ್ಳಿಯವರೆಗೂ ರಾಜ್ಯ ಹೆದ್ದಾರಿಯಿಂದ ರಾಷ್ಟ್ರ ಹೆದ್ದಾರಿಯನ್ನು ತಲುಪುವ ಜಾಗವಿದ್ದು, ಅಲ್ಲಿ ಬಹಳಷ್ಟು ಅಪಘಾತಗಳಾಗುತ್ತಿದೆ. ಹಾಗಾಗಿ ರಾಜ್ಯ ಹೆದ್ದಾರಿಯಿಂದ ರಾಷ್ಟ್ರ ಹೆದ್ದಾರಿಗೆ ಹೋಗುವಂತಹ ನಾಲ್ಕು ಪಥದ ರಸ್ತೆ ಏನಿದೆ, ಅದನ್ನು ಆರು ಪಥದ ರಸ್ತೆಯನ್ನಾಗಿ ಮಾಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರೆ:– ಅದಕ್ಕೆ ಉತ್ತರ ಬಂದಿಲ್ಲ, ಉತ್ತರ ಕೊಡುತ್ತಾರೆ. ಈಗ ರೇವಣ್ಣನವರು ಕೇಳಿ.

8) ವಿಷಯ: ಹಾಸನದ ಇಂಜಿನಿಯರಿಂಗ್ ಕಾಲೇಜಿನಲ್ಲಿ 2015–16ನೇ ಶೈಕ್ಷಣಿಕ ವರ್ಷದಲ್ಲಿ ಸಂಜೆ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಕಾಲೇಜನ್ನು ಆರಂಭಿಸಲು ಸೂಕ್ತ ಕಟ್ಟಡವಿದ್ದು ಬೋಧಕ ಸಿಬ್ಬಂದಿ ವರ್ಗ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅನುದಾನವನ್ನು ನೀಡುವ ಬಗ್ಗೆ

ಶ್ರೀ ಹೆಚ್.ಡಿ. ರೇವಣ್ಣ (ಹಾಸನ):– ಮಾನ್ಯ ಅಧ್ಯಕ್ಷರೆ, ಹಾಸನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ಬಿಲ್ಡಿಂಗ್ ಇದೆ. ಅಲ್ಲಿ evening college ಮಾಡಬೇಕೆಂದು ಕೇಳಿದ್ದೇವೆ. ಅದನ್ನು ಮಾಡುವುದಕ್ಕೆ ಈ ವರ್ಷ ಗ್ರಾಂಟ್ ಕೊಟ್ಟರೆ ಸಾಕು. ಈಗಾಗಲೇ ಸಂಜೆ ಕಾಲೇಜು ಮಾಡುವುದಕ್ಕೆ ಎಐಸಿಟಿಇ ಯಿಂದ ಅನುಮತಿಗೆ ಹಾಕಿದ್ದರು. ಅವರು ಮೂಲಭೂತ ಸೌಕರ್ಯ ಕೊಟ್ಟರೆ ಎಂದರೆ ಟೀಚರ್ ಸ್ಟಾಫ್ ಕೊಟ್ಟರೆ ಸಾಕು, ನಾವು ಮಾಡಿಕೊಡುತ್ತೇವೆಂದು ಹೇಳುತ್ತಾರೆ. ಅದನ್ನು ನಾನು ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು:– ಕಾಲೇಜು ಮಂಜೂರು ಆಗಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, last year ಮಂಜೂರಾತಿ ಕೊಟ್ಟಿದ್ದಾರೆ.

ಅಧ್ಯಕ್ಷರು:– ಪ್ರಾರಂಭ ಮಾಡಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಪ್ರಾರಂಭ ಮಾಡಿಲ್ಲ, only teachers ಅನ್ನು ಕೊಡಬೇಕು.

ಅಧ್ಯಕ್ಷರು:– ಈ ವಿಷಯಕ್ಕೆ reply ಇದೆ, ಯಾರಾದರೂ ಮಂತ್ರಿಯವರು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, Finance Department ನಿಂದ ಎರಡು ಕೋಟಿ ಇಪ್ಪತ್ತು ಲಕ್ಷ ರೂ.ಗಳಿಗೆ ಮಂಜೂರಾತಿ ಕೊಟ್ಟರೆ ಆಗುತ್ತದೆ.

ಅಧ್ಯಕ್ಷರು:– ಮಾನ್ಯ ಕೃಷಿ ಸಚಿವರೆ, statement ಮಾಡಿ.

ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು) (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,

ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರದ ಅನುದಾನದಡಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನಕ್ಕೆ ಸಿವಿಲ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ಯಂತ್ರೋಪಕರಣ ಖರೀದಿಸಲು ರೂ.36.00 ಲಕ್ಷಗಳನ್ನು ಕಂಪ್ಯೂಟರ್ ಖರೀದಿಸಲು ರೂ.24.00 ಲಕ್ಷಗಳನ್ನು, ಇತರೆ ಯಂತ್ರೋಪಕರಣಗಳನ್ನು ಖರೀದಿಸಲು ರೂ. 24.00 ಲಕ್ಷಗಳನ್ನು, ರೂ.13.75 ಲಕ್ಷದ ಡೆಸ್ಕ್, ರೂ.10.00 ಲಕ್ಷದ ಪುಸ್ತಕಗಳನ್ನು ಖರೀದಿಸಲು ಈಗಾಗಲೇ ಕ್ರಮ ಜರುಗಿಸಲಾಗಿದೆ.

ಎಐಸಿಟಿಇ ಮಾರ್ಗ ಸೂಚಿಗಳನ್ವಯ ಸಂಸ್ಥೆಯು ಎನ್.ಬಿ.ಎ, ಅಕ್ರಿಡಿಟೇಷನ್ ಹೊಂದಬೇಕಿದ್ದು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು,

ಹಾಸನ ಸಂಸ್ಥೆಯು ಎನ್.ಬಿ.ಎ ಅಕ್ರಿಡಿಟೇಷನ್ ಹೊಂದಲು ಪ್ರಿನ್ಸಿಪಾಲರಿಗೆ ಕ್ರಮವಹಿಸಲು ಸೂಚಿಸಲಾಗಿದೆ.

2015–16 ನೇ ಸಾಲಿಗೆ ಎಐಸಿಟಿಇ, ನವದೆಹಲಿಯಲ್ಲಿ ಸಂಜೆ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲು ಅನುಮತಿ ಪಡೆಯಲು 20–02–2015 ರ ಒಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕಾಲಾವಕಾಶವಿದ್ದು, ಪ್ರಿನ್ಸಿಪಾಲರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ ಇವರಿಗೆ ಎಐಸಿಟಿಇ ಯಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಲು ಈಗಾಗಲೇ ನಿರ್ದೇಶನ ನೀಡಲಾಗಿದೆ. ಎಐಸಿಟಿಇ, ನವದೆಹಲಿಯವರ ಅನುಮೋದನೆ ದೊರೆತ ಮೇಲೆ ಪರಿಶೀಲಿಸಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನದಲ್ಲಿ ಸಂಜೆ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದು.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, last year AICTE ಗೆ ಅರ್ಜಿ ಹಾಕಿದ್ದರು. ಇದು last year ಆಗಿದೆ, Finance Department ನಲ್ಲಿ ಎರಡು ಕೋಟಿ ಇಪ್ಪತ್ತು ಲಕ್ಷ ರೂ.ಗಳು ಮಂಜೂರು ಮಾಡಿ, ಕಾಲೇಜಿಗೆ ಬೇಕಾಗುವಂಥ teachers, staff ಕೊಟ್ಟರೆ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಮಂಜೂರಾತಿ ಮಾಡುವುದಕ್ಕೆ ಹಣಕಾಸು ಇಲಾಖೆಯಲ್ಲಿದೆ. ಅದನ್ನು ಮಾಡಿಸಿಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಕೃಷ್ಣ ಭೈರೇಗೌಡ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮೂಲ ಸೌಲಭ್ಯಕ್ಕೆ ಹಣ ಬಿಡುಗಡೆ ಮಾಡಿದೆ. ಇನ್ನು ಉಳಿಕೆ ಬಗ್ಗೆ ಏನು ಮನವಿ ಮಾಡಿದ್ದಾರೆ, ಅದನ್ನು ಪರಿಶೀಲಿಸುವುದಕ್ಕೆ ಹೇಳುತ್ತೇವೆ.

ಅಧ್ಯಕ್ಷರು:– In principal agree ಆಗಿದ್ದಾರಲ್ಲಾ, ಆಗುತ್ತದೆ. ಇನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆ ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ)ಯವರು..

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ಮಾನ್ಯ ಸಚಿವರನ್ನು ಆಮೇಲೆ ಕರೆಸುತ್ತೇವೆಂದು ಹೇಳಿದರು. ಇದಕ್ಕೆ Food & Civil Supplies Minister ಉತ್ತರ ಕೊಡಬೇಕು.

ಶ್ರೀ ಕೃಷ್ಣ ಭೈರೇಗೌಡ:– ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಹೇಳಿಕೆ ಇದೆ, ಒಂದು ನಿಮಿಷ ಹೇಳುತ್ತೇನೆ.

7. ವಿಷಯ: ಎಪಿಎಲ್ ಪಡಿತರ ಚೀಟಿ ಹೊಂದಿರುವ ಎಸ್.ಸಿ/ಎಸ್.ಟಿ ಕುಟುಂಬದವರಿಗೂ ಅಡುಗೆ ಅನಿಲ ಸಂಪರ್ಕ ವಿಸ್ತರಿಸುವ ಬಗ್ಗೆ.

ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು) (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ಕೇಂದ್ರ ಸರ್ಕಾರದ ಪತ್ರ ಸಂಖ್ಯೆ ಪಿ– 17018/24/2009–ಎಮ್‌ಕೆಟಿ ದಿನಾಂಕ 31–12–2014 ಹಾಗೂ ಸ್ಟೇಟ್ ಲೆವೆಲ್ ಕೋ ಆರ್ಡಿನೇಟರ್, ಇಂಡಿಯನ್ ಆಯಿಲ್ ಲಿಮಿಟೆಡ್, ಬೆಂಗಳೂರು ರವರ ಪತ್ರ ಸಂಖ್ಯೆ ಕೆಎಎಸ್‌ಓ / ಎಲ್‌ಪಿಜಿ / 16 ದಿನಾಂಕ 2–1–2015ರನ್ವಯ ಸಿ.ಎಸ್.ಆರ್. (Corporate Social Responsibility) ನಿಧಿ ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ ಸುಮಾರು 2.40 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ನಿಯಮಾನುಸಾರ ಅಂದಾಜು 15000 ಬಿಪಿಎಲ್ ಕುಟುಂಬಗಳಿಗೆ ಅನಿಲ ಸಂಪರ್ಕ ನೀಡಬಹುದಾಗಿದೆ. ಆದರೆ, ಬೆಂಗಳೂರು ನಗರದ ಪ್ರದೇಶದಲ್ಲಿ 331446 ಬಿಪಿಎಲ್ ಅನಿಲ ರಹಿತ ಪಡಿತರ